# ದಾರಿ ತಪ್ಪಿದ ಸರ್ ಹಿಸ್‌ನ ಕೊನೆಗೂ ಹುಡುಕಿ ಪಡೆದರು



ಮೃಗಾಲಯದಿಂದ ತಪ್ಪಿಸಿಕೊಂಡಿದ್ದ ‘ಸರ್ ಹಿಸ್’ ಸುದ್ದಿ ಎಲ್ಲೆಲ್ಲೂ ಹಬ್ಬಿತ್ತು. ಸ್ವೀಡನ್‌ನಿಂದ ಕೇರಳದವರೆಗೂ ರೋಚಕ ಸಂಗತಿಗಳು ಹರಿದಾಡಿದ್ದವು.

**ಸರೋಜಾ ಪ್ರಕಾಶ**

ಸ್ವೀಡನ್‌ನ ಪ್ರಾಣಿ ಸಂಗ್ರಹಾಲಯದಿಂದ ಆ ಕಾಳಿಂಗ ಸರ್ಪ ತಪ್ಪಿಸಿಕೊಂಡ ವಿಷಯ ನಮಗೆ ತಿಳಿದಿದ್ದು ಮೊಮ್ಮಗನಿಗೆ ವಾಡಿಕೆಯ ವಿಡಿಯೊ ಕರೆಯಲ್ಲಿ ಸುರತ್ಕಲ್ ಅಜ್ಜ ತಿಳಿಸಿದಾಗ. ‘ಕೇರಳದ ಉರಗತಜ್ಞನನ್ನು ಅಲ್ಲಿಗೆ ಕರೆದಿದ್ದಾರಂತೆ’ ಎಂದರು ಅಜ್ಜ.

ಅಕ್ಟೋಬರ್ ತಿಂಗಳು ಅದು. ನಾವು ಸ್ವೀಡನ್‌ನ ರಾಜಧಾನಿ ಸ್ಟಾಕ್ ಹೋಂಗೆ ಹೋಗುಳಿದು ಎರಡು ತಿಂಗಳಾಗಿದ್ದವು. ದಿನೇ ದಿನೇ ಚಳಿ ಹೆಚ್ಚುತ್ತಾ ಇತ್ತು, ಜನರು ಬಳಸುವ ಕೋಟು, ಶೂ, ಕೈಗವುಸುಗಳ ದಪ್ಪವೂ.

‘ಓಹ್, ಅದಿರೋ ಸ್ಕಾನ್‌ಸೆನ್ ಅಕ್ವೇರಿಯಂ ನಮ್ ಮನೆ ಹತ್ತಿರವೇ ಇದೆ’ ಎನ್ನುವುದು ಮೊಬೈಲ್‌ನಲ್ಲಿ ಕೈಯಾಡಿಸಿದಾಗ ತಿಳಿದು, ಆ ಕಾಳಿಂಗ ಸರ್ಪದ ಬಗ್ಗೆ ಕುತೂಹಲ ಮೂಡಿತ್ತು. ನಮ್ಮ ನಾಡಿನ ಹಾವಾಡಿಗ 6000 ಕಿ.ಮೀ. ದೂರದಿಂದ ಇಲ್ಲಿಗೆ ಬಂದು ಅದನ್ನು ಹುಡುಕುವರೆ? ವಿವರ ತಿಳಿಯಬೇಕೆನಿಸಿತ್ತು.

ಏಷ್ಯಾದ ಕಾಳಿಂಗ ಸರ್ಪ ಜಗತ್ತಿನಲ್ಲಿಯೇ ಅತಿ ಹೆಚ್ಚು ವಿಷವುಳ್ಳ ಹಾವು, ಅತಿ ಉದ್ದದ ಹಾವು. ನೀರಿನಲ್ಲೂ, ನೆಲದಲ್ಲೂ, ಗೋಡೆಯ ಮೇಲೂ ಸರಸರನೆ ಚಲಿಸಬಲ್ಲದು. ಇದರ ವಿಷದ ಒಂದು ಹನಿ ಮಾನವ ದೇಹ ಪ್ರವೇಶಿಸಿದರೂ ಸಾವು ಖಚಿತ. ದೊಡ್ಡ ದೇಹದ ಆನೆ ಕೂಡ ಕಾಳಿಂಗ ಸರ್ಪದಿಂದ ಕಚ್ಚಿಸಿಕೊಂಡರೆ ತಾಸೆರಡು ಕಳೆಯುವುದರೊಳಗೆ ಸಾವಿಗೀಡಾಗುತ್ತದೆ.

ಮೊಮ್ಮಗನನ್ನು ಶಾಲೆಗೆ ಕಳಿಸಿ ಬಂದು ಸ್ವೀಡಿಶ್ ಮಾಧ್ಯಮಗಳ ವರದಿಗೆ, ಸ್ವೀಡಿಶ್ ಶಬ್ದಾರ್ಥಗಳಿಗೆ ಮಗಳನ್ನು ಕೇಳಿಕೊಂಡೆ. ನಾವೊಮ್ಮೆ ಸ್ಕಾನ್‌ಸೆನ್ ಝೂಗೆ ಭೇಟಿ ಇತ್ತರೆ ಹೇಗೆ? ಆದರೆ ದುಬಾರಿ ಪ್ರವೇಶ ಫೀ ಕೇಳಿಯೇ ಆ ವಿಚಾರ ಕೈಬಿಡಬೇಕಾಯಿತು. ಕಂಪ್ಯೂಟರ್ ಮೊರೆ ಹೊಕ್ಕೆ.

ಆ ಹಾವಿರುವ ಕೋಣೆಯ ಲೈಟ್ ಬಲ್ಬನ್ನು ಕೆಲವು ದಿನಗಳ ಹಿಂದೆಯಷ್ಟೇ ಬದಲಿಸಲಾಗಿತ್ತು. ಮೈಕೈಗೆ ಗವುಸು ಧರಿಸಿದ ಕೆಲಸಗಾರನೊಬ್ಬ ಹೆಚ್ಚು ಶಾಖ ಬೀರುವ ಬಲ್ಬ್ ಬದಲಾಗಿ ಎಲ್‌ಇಡಿ ಬಲ್ಬ್ ಹಾಕಿ ಹೋಗಿದ್ದ. ಆಚೀಚೆ ಹರಿದಾಡಿದ ಹಾವು ಬಲ್ಬ್‌ನ ಬುಡದ ತೂತಿನಲ್ಲಿ ತಲೆ ತೂರಿಸಿ ಹೊರಗೆ ಜಾರಿತ್ತು. ಮೈ ಚಪ್ಪಟೆಯಾಗಿಸುವ ಕಲೆ ಗೊತ್ತು ಅದಕ್ಕೆ. ಪ್ರವಾಸಿಯೊಬ್ಬನ ಕ್ಯಾಮೆರಾದಲ್ಲಿ ಬಲ್ಬ್ ಬುಡದಲ್ಲಿ ತಲೆ ತೂರಿಸಿದ್ದ ಹಾವಿನ ವಿಡಿಯೊ ದಾಖಲಾಗಿತ್ತು. ಆತ ಆ ಮಾಹಿತಿಯನ್ನು ಅಧಿಕಾರಿಗಳಿಗೆ ರವಾನಿಸಿದ್ದ.

ಸ್ಕಾನ್‌ಸೆನ್‌ನ ಝೂನಲ್ಲಿ 1978ರಲ್ಲಿ ಆರಂಭಗೊಂಡ ಅಕ್ವೇರಿಯಂ ವಿಭಾಗದಲ್ಲಿ ವಿವಿಧ ಜಾತಿಯ ಮೀನು, ಮೊಸಳೆಗಳಂಥ ಜಲಚರಗಳಲ್ಲದೆ ಚೇಳು, ಜೇಡ, ಆಮೆ, ಹಲ್ಲಿ, ಹಾವುಗಳಂಥ ಉಭಯಚರಗಳೂ ಇವೆ. ಸುಮಾರು 200 ಜಾತಿಯ ವಿದೇಶೀ ಪ್ರಾಣಿಗಳಿವೆ. ಅವೆಲ್ಲವುಗಳಿಗೆ ಹಿತಕರವಾಗುವಂತೆ ತಾಪಮಾನವನ್ನು ಕೃತಕವಾಗಿ ಸೃಷ್ಟಿಸಿಡಲಾಗಿದೆ.

‘ಸರ್ ಹಿಸ್’ ಕೆಲವೇ ದಿನಗಳ ಹಿಂದೆ ಆಗಮಿಸಿದ ಐದೂವರೆ ಅಡಿ ಉದ್ದದ ಈ ಹೊಸ ಅತಿಥಿಯ ಹೆಸರು. (ಹೆದರಿದಾಗ ಅಥವಾ ಬೇಟೆಯಾಡುವಾಗ ಕಾಳಿಂಗ ಸರ್ಪ ಹೆಡೆ ಎತ್ತಿ ಹಿಸ್‌ಸ್ ಎಂದು ಶಬ್ದ ಮಾಡುತ್ತದೆ. ಆ ಭಯಂಕರ ರೂಪ ಅಲ್ಲಿ ‘ಸರ್ ಹಿಸ್’ ನಾಮಾಂಕಿತ) ಅದೀಗ